# ಜಲಸ್ಥಂಭನ

ಅವನಿಗೆ ನೀರನ್ನು ಕಂಡರೆ ಭಯ. ಹಾಗಂತ ಹೈಡ್ರೋಫೋಬಿಯ ಅಂದ್ಕೊಂಡು ಬಿಡಬೇಡಿ. ಕುಡಿಯುವ ನೀರಿನ ಲೋಟವನ್ನೂ ಹೆದರಿ ಎಸೆದು ಬಿಡುವಂತ ಜಲಭಯವೇನೂ ಅವನಿಗಿರಲಿಲ್ಲ. ಆದರೆ ನದಿ, ತೊರೆ, ಕೊಳಗಳನ್ನು ಕಂಡರೆ ಅವನಿಗೆ ವಿಲಕ್ಷಣ ಭಯವಿತ್ತು. ಮನೆಯಲ್ಲಿ ತಣ್ಣೀರಿನ ಸ್ನಾನ ಮಾಡುತ್ತಿದ್ದನಾದರೂ ನೀರಿಗಿಳಿಯುತ್ತಿರಲಿಲ್ಲ. ನೀರಿಗಿಳಿದರೆ ಆ ಅಗಾಧವಾದ ಜಲರಾಶಿ ತನ್ನ ನವರಂಧ್ರಗಳಲ್ಲೂ ದೇಹದ ಒಳನುಸುಳಿ ಪ್ರಾಣಪಕ್ಷಿಯನ್ನು ಹೊರ ಓಡಿಸಿಬಿಡುವುದೇನೋ ಅನಿಸಿಬಿಡುತಿತ್ತು.

ಇಷ್ಟೇನಾ? ಇದರಲ್ಲೇನಿದೆ ವಿಶೇಷ? ನಮ್ಮಲ್ಲೂ ಎಷ್ಟೋ ಜನಕ್ಕೆ ಈಜಲು ಬರುವುದಿಲ್ಲ. ನೀರಿಗಿಳಿಯೋಕೇ ಹೆದರಿಕೊಂಡುಬಿಡುತ್ತಾರೆ ಅಂದುಬಿಡಬೇಡಿ ಇದೆಲ್ಲ ಐದುವರ್ಷದ ಹಿಂದಿನ ಮಾತು, ಈಗ ಕತೇನೇ ಬೇರೆ ಇದೆ. ಆದರೆ ಅದನ್ನು ಹೇಳೋಕೆ ಮುಂಚೆ ಅವನ ಭಯದ ಬಗ್ಗೆ ಇನ್ನೊಂದು ಸ್ವಲ್ಪ ತಿಳಿದುಕೊಳ್ಳಿ.

ಸಣ್ಣವನಿದ್ದಾಗ, ಬೇಸಿಗೆ ರಜೆಯಲ್ಲಿ ಅವನೊಮ್ಮೆ ಅಜ್ಜಿಯ ಹಳ್ಳಿಗೆ ಹೋಗಿದ್ದ. ಹಳ್ಳಿ ನಗರದ ಗೌಜು ಗದ್ದಲದಿಂದ ಬಹುದೂರ, ಮಲೆನಾಡಿನ ಮಡಿಲಿನಲ್ಲಿತ್ತು. ಹಳ್ಳಿಯ ಹಿಂದಕ್ಕೆ ದೊಡ್ಡ ಕೆರೆ, ಚಚ್ಚೌಕದ ಕೆರೆಯ ಒಂದು ಕಡೆ ಮಾತ್ರ ಕೆರೆಗಿಳಿಯಲು ಕಲ್ಲುಗಳು. ಒಂದು ದಿನ ಬೆಳಿಗ್ಗೆ ಅವನು ಹಳ್ಳಿಯಲ್ಲೇ ಹುಟ್ಟಿಬೆಳೆದ ತನ್ನದೇ ವಯಸ್ಸಿನ ಮಾವನ ಮಗನ ಜೊತೆ ಊರಾಚೆ ಬಹಿರ್ದೆಸೆಗೆ ಹೋಗಿದ್ದ. ಇಬ್ಬರೂ ಹುಡುಗರೂ ಕೆಲಸ ಮುಗಿಸಿಕೊಂಡುಬಂದು ತೊಳೆದುಕೊಳ್ಳಲು ಕೆರೆಯಬಳಿ ಬಂದರು. ಕೆರೆಯ ಮೆಟ್ಟಿಲುಗಳ ಭಾಗದಲ್ಲಿ ಹೆಂಗಸರು ಬಟ್ಟೆ ತೊಳೆಯುತ್ತಿದ್ದರಾದ್ದರಿಂದ, ಮೆಟ್ಟಿಲುಗಳಿಲ್ಲದ, ಸ್ವಲ್ಪವೇ ಕೆಸರಾಗಿದ್ದ ಅಂಚಿಗೆ ಬಂದರು. ನೀರು ಪ್ರಶಾಂತವಾಗಿತ್ತು.

ಪಟ್ಟಣದಲ್ಲಿ ಬೆಳೆದ ಈತನಿಗೆ ಕೆರೆ ಕಂಡರೆ ವಯೋಸಹಜವಾದ ಕುತೂಹಲ-ಭಯವಿತ್ತು. ಬೇಸಿಗೆಯಾದುದರಿಂದ ಹಾಗೂ ಕೆರೆಯ ಸುತ್ತ ಬೆಳೆದಿದ್ದ ಮರಗಳ ಎಲೆಯುದುರುವಿಕೆಯಿಂದಾಗಿ ನೀರು ಹಸಿರಾಗಿತ್ತು. ಮಾವನ ಮಗ ಎಲ್ಲ ತಿಳಿದವನಂತೆ ನೀರಿನೊಳಕ್ಕೆ ನಡೆದವನೇ, ನೀರಿನಲ್ಲಿ ಕುಳಿತು ತನ್ನ ಬುಡವನ್ನು ಆಕಡೆ ಈಕಡೆ ಆಡಿಸಿ, 'ನೋಡು, ತಂತಾನೇ ತೊಳ್ಕೋತಿದೆ..' ಅಂತಾ ನಕ್ಕ. ಇಬ್ಬರೂ ನಕ್ಕರು. ಅವನು ಈಚೆ ಬಂದು 'ನೀನೂ ತೊಳ್ಕೋಹೋಗು' ಅಂದಾಗ ಇವನು ಎಚ್ಚರಿಕೆಯಿಂದಲೇ ನೀರಿನೊಳಕ್ಕೆ ಹೆಜ್ಜೆಯಿಟ್ಟ. ತಣ್ಣೀರು, ಮೆತ್ತಗಿನ ಕೆಸರು ಮಣ್ಣು ಸಣ್ಣಗೆ ನಡುಗು ಹುಟ್ಟಿಸಿತಾದರೂ ಮುಂದೆ ನಡೆದ. ಮಾವನ ಮಗ, ನೀರಿನೊಳಗೆ ಅಸ್ಪಷ್ಟವಾಗಿ ಕಾಣುತಿದ್ದ ಕಲ್ಲನ್ನು ತೋರಿಸಿ 'ಅದರ ಮೇಲೆ ಕೂತ್ಕೋ, ಅಂಗಿ ಮೇಲಕ್ಕೆತ್ಕೋ, ಸ್ವಲ್ಪ ಹಾಗೆ ಹೀಗೆ ಸೊಂಟ ಅಲ್ಲಾಡ್ಸು, ತಂತಾನೇ ತೊಳ್ಕೊಳುತ್ತೆ', ಅಂದು ನಕ್ಕ. ಇವನು ನಗುತ್ತಲೇ ಎಚ್ಚರಿಕೆಯಿಂದ ಆ ಸಣ್ಣ ಕಲ್ಲಮೇಲೆ ಎರಡೂ ಕಾಲುಗಳನಿಟ್ಟುಕೊಂಡು ಕುಕ್ಕರ ಕೂತ. ಸೊಂಟವೆಲ್ಲ ನೀರಿನಲ್ಲಿ ಮುಳುಗಿತು. ಮಾವನ ಮಗ, 'ಜೋಪಾನ ಕಲ್ಲು ಅಲ್ಲಾಡುತ್ತೆ..' ಅಂದನೋ ಇಲ್ಲವೋ ಇವನು ಸೊಂಟ ಅಲ್ಲಾಡಿಸಲು ಹೋಗಿ ಧೊಪ್ಪನೆ ಕಲ್ಲುಬಿಟ್ಟು ನೀರಿನೊಳಕ್ಕೆ ಬಿದ್ದ. ಬಿದ್ದವನಿಗೆ ಕಣ್ಣಮುಂದೆ ಹಸಿರು ಪರದೆ ಕಟ್ಟಿದಂತಾಯ್ತು. ತಟ್ಟನೆ ಉಸಿರೆಳೆದುಕೊಂಡಿದುದರಿಂದ ಮೂಗು-ಬಾಯಿಯಲ್ಲಿ ನೀರು ತುಂಬಿಕೊಂಡಿತು, ತಲೆ ಭಾರವಾಯ್ತು. ಕಣ್ಣು ಕತ್ತಲೆ ಬಂದಂತಾಗಿ, ಕೈಕಾಲು ಕೆದರಿ, ನೀರಿನ ತಳದ ಕೆಸರು ಮಣ್ಣನೆಲ್ಲ ಬಗೆದಾಡಿ, ಯಾವುದು ಮೇಲೆ, ಯಾವುದು ಕೆಳಗೆ ಎಂದು ತಿಳಿಯದೇ ಒದ್ದಾಡಿ ಧುತ್ತನೆ ನೀರಿನಿಂದ ಎದ್ದುನಿಂತ.

ಏದುಸಿರು ಬಿಡುತ್ತ ನಿಂತವನಿಗೆ ಮಾವನ ಮಗ ಅಲ್ಲೆಲ್ಲೂ ಕಾಣಿಸಲಿಲ್ಲ. ಮೂಗು ಉರಿದು, ಗಂಟಲುಬ್ಬಿ, ಸೀನು ಬಂ ದವು. ಎದೆಯ ಬಡಿತ ತಾರಕಕ್ಕೇರಿತ್ತು. ಹೆದರಿದವನೇ ನೀರಿನಲ್ಲಿ ತೇಲುತ್ತಿದ್ದ ಚಡ್ಡಿಯನ್ನು ತೆಗೆದುಕೊಂಡು ನೀರಿನಿಂದ ಹೊರಗೋಡಿಬಂದ, ನಡುಕ ಮೈಯನ್ನಾವರಿಸಿಕೊಂಡಿತು. ಏನು ಮಾಡುವುದು ತಿಳಿಯದೇ ಬಟ್ಟೆಯೆಲ್ಲಾ ನೆನೆದಿದ್ದುದರಿಂದ ಮನೆಗೆ ಹೋಗಲು ಹೆದರಿ, ಒದ್ದೆ ಚಡ್ಡಿಯನ್ನೇ ಏರಿಸಿಕೊಂಡು ಗಡಗಡ ನಡುಗುತ್ತ ಅಲ್ಲೇ ನಿಂತ. ನೀರು ಅವನು ಬಿದ್ದಿದ್ದ ಜಾಗದಲ್ಲಿ ಮಾತ್ರ ಕೆಸರು ಮೇಲಕ್ಕೆದ್ದು ಬಗ್ಗಡವಾಗಿತ್ತು. ಆ ಅಂಚಿನಲ್ಲಿ ಬಟ್ಟೆ ತೊಳೆಯುತ್ತಿದ್ದ ಹೆಂಗಸರಿಗೆ ಇದ್ಯಾವುದೂ ಗೊತ್ತಾಗಲಿಲ್ಲ. ನೀರಿಳಿಸಿಕೊಂಡವನಿಗೆ ದೂರದಲ್ಲಿ ಅಜ್ಜಿಯೂ ಮಾವನ ಮಗನೂ ಓಡಿಬರುತ್ತಿರುವುದು ಕಾಣಿಸಿತು. ಅಜ್ಜಿ ಬಂದವಳೇ ಹೆದರಿ ತೊಪ್ಪಾಗಿದ್ದ ಇವನಿಗೆ ಎರಡೇಟು ಬಿಗಿದಳು, 'ಮನೆಗೆ ಬಂದಿದ್ದರೆ ನೀರು ಕೊಡ್ತಿರ್ಲಿಲ್ವೇನೂ?' ಅಂತ. ಮಾವನ ಮಗನಿಗೂ 'ಇದೆಲ್ಲ ನೀನೇ ಕಲಿಸಿದ್ದಾ?' ಅಂತ ಎರಡೇಟು ಬಿದ್ದವು.

ವರುಷಗಳುರುಳಿದರೂ ಇವನ ಸ್ಮೃತಿಪಟಲದಿಂದ ಈ ಘಟನೆ ಮರೆಯಾಗಲೇ ಇಲ್ಲ. ನೀರು ಇವನ ಮನಸ್ಸಿಗೆ ಮಹಾಮೋಸದ ಜೀವ ಅನಿಸತೊಡಗಿತು. ಬಾಲ್ಯದಲ್ಲಿ ಘಟಿಸಿದ ಘಟನೆಗಳಿಂದಲೇ ನಮ್ಮ ವ್ಯಕ್ತಿತ್ವ ರೂಪುಗೊಳ್ಳುತ್ತದೆ ಎಂಬ ಸಿದ್ಧಾಂತ ನಂಬುವುದಾದರೆ ಇವನು ಅದಕ್ಕೊಂದು ಉದಾಹರಣೆಯಾಗಿಬಿಟ್ಟ.

ಸ್ಕೂಲು ಮುಗಿದು ಕಾಲೇಜು ಕಂಡಾಯ್ತು. ಕಾಲೇಜು ಪ್ರವಾಸಗಳಲ್ಲಿ, ಪಿಕ್‌ನಿಕ್‌ಗಳಲ್ಲಿ ಝರಿಯೋ ನದಿಯೋ ಇದ್ದರೆ ಇವನದು ಸದಾ ದಡದ ಮೇಲೆ ಸ್ನಾನ. ಬಂಡೆಗಳ ಅಂಚಿನಲ್ಲಿ ಕುಳಿತು ನೀರಿನೊಂದಿಗೆ ಆಟ. ಸ್ನೇಹಿತಲ್ಲರೂ ಕರೆದರೂ, ಗೇಲಿಮಾಡಿದರೂ ಇವನಿಗೆ ಜಾಗರೂಕತೆಯಿಂದ ಇದ್ದುಬಿಡುವುದೇ ಲೇಸು ಎನಿಸಿತ್ತು. ಹಾಗಾಗಿ ಕಾಲೇಜು ಕಳೆದರೂ ಇವನಿಗೆ ಈಜುವುದನ್ನು ಕಲಿಯಲಾಗಲಿಲ್ಲ.

ದೊಡ್ಡ ಪಟ್ಟಣವೊಂದರಲ್ಲಿ ಕೆಲಸವೂ ಸಿಕ್ಕು ಜೀವನ ಯಾಂತ್ರಿಕವಾಗತೊಡಗಿದ ದಿನಗಳಲ್ಲಿ ಇವನಿಗೊಬ್ಬ ಸ್ನೇಹಿತ ಸಿಕ್ಕಿದ, ಇವನಿಗೆ ಮತ್ತೆ ನೀರಿನ ಬಗೆಗಿನ ಭಯ ಜಾಗೃತವಾಯ್ತು. ಇವನ ಆ ಸ್ನೇಹಿತ ತುಂಬಾ ಚೂಟಿ ಹುಡುಗ, ಇವನೊಂದಿಗೆ ರೂಮಿನಲ್ಲಿ ಇರತೊಡಗಿದವನು ಒಂದೇ ವಾರಕ್ಕೆ ಪ್ರತೀದಿನ ಕ್ರಿಕೆಟ್ ಆಡಲು ಹತ್ತಿರದ ಆಟದ ಬಯಲನ್ನು ಹುಡುಕಿಕೊಂಡ. ಅವನಿಗೆ ಅಲ್ಲಿಯೇ ಕೆಲವು ಜನ ಸ್ನೇಹಿತರಾದರು.

ಕೊನೆಗೊಮ್ಮೆ ನಗರದಲ್ಲಿ, ತಾವಿದ್ದ ಏರಿಯಾದಲ್ಲೇ ಇರುವ ಈಜುಕೊಳವೊಂದನ್ನು ಗೊತ್ತುಮಾಡಿಕೊಂಡು, ಇವನನ್ನು ಈಜಲು ಬರುವಂತೆ ಕರೆದ. ಇವನಿಗೆ ಭಯ ಶುರುವಾಯಿತು. ಇವನ ಆ ಸ್ನೇಹಿತ ತಾನೇ ಈಜು ಕಲಿಸಿಕೊಡುವುದಾಗಿ ಹೇಳಿದ. ಇವನು ಪ್ರಪಂಚದಲ್ಲಿ ಎಷ್ಟೋ ಜನ ಈಜು ಕಲಿಯದೇ ಬಾಳಿಲ್ಲವೇ ಅಂದರೆ ಅವನು, 'ಈಸಬೇಕು, ಇದ್ದು ಜೈಸಬೇಕು' ಅಂತ ವಾದ ಹೂಡಿದ. ಪ್ರಯತ್ನವನ್ನೇ ಮಾಡದಿದ್ದರೆ ಸಾಧ್ಯಾಸಾಧ್ಯತೆಗಳು ಹೇಗೆ ತಿಳಿಯುತ್ತವೆ ಎಂದು ಪರಿಪರಿಯಾಗಿ ಪೀಡಿಸಿದಮೇಲೆ ಇವನಿಗೆ ನೀರಿಗಿಳಿದು ನೋಡಿಯೇಬಿಡುವಾ ಅನಿಸಿತು.

ಮೊದಲನೇ ದಿನ ನೀರಿನಲ್ಲಿಳಿದ ಕೂಡಲೇ ಇವನಿಗೆ ಬೆನ್ನಹುರಿಯಾದ್ಯಂತ ನಡುಕ ಆವರಿಸಿಕೊಂಡಿತು. ಇವನ ಸ್ನೇಹಿತ ಇವನನ್ನು ಬಿಟ್ಟು ಅಲುಗಲಿಲ್ಲ. ಈಜುಕೊಳದಲ್ಲಿ ಕಲಿಯುವವರಿಗೆಂದೇ ಅತೀಕಡಿಮೆ ಆಳದ ಕಡೆ ಹಾಕಿದ್ದ ಪೈಪನ್ನು ಹಿಡಿದುಕೊಂಡು ನಡುಕ ನಿಲ್ಲುವವರೆಗೂ ಧೀರ್ಘವಾಗಿ ಉಸಿರಾಡುವಂತೆ ಹೇಳಿದ; ಮೊದಲು ಮೂರು ಅಡಿಯ ಆಳದಲ್ಲೇ ಕತ್ತಿನ ತನಕ ಮುಳುಗುವಂತೆ ಹೇಳಿದ; ನಡುಕ ಕಡಿಮೆಯಾದಮೇಲೆ ಹಿಡಿದ ಪೈಪು ಬಿಡದ ಹಾಗೆ ತಲೆ ಪೂರಾ ಮುಳುಗಿಸುವಂತೆ ಹೇಳಿದ. ಇವನು ಹೆದರುತ್ತಲೇ ಧೀರ್ಘವಾಗಿ ಉಸಿರೆಳೆದುಕೊಂಡು, ತಲೆ ಮುಳುಗಿಸಿಬಿಟ್ಟ. ಕಣ್ಣಮುಂದೆ ನೀರಿನ ಪರದೆ ಆವರಿಸಿಕೊಂಡಿತು; ನೀರು ರಂಧ್ರ ರಂಧ್ರಗಳಲ್ಲೂ ಒಳನುಗ್ಗುವುದಕ್ಕೆ ಒತ್ತಡ ಹಾಕಲಾರಂಭಿಸಿತು. ಇವನು ಧುತ್ತನೆ ನೀರಿನಿಂದೆದ್ದು ನಿಂತ. ಇವನ ಸ್ನೇಹಿತ ಅಪ್ಯಾಯಮಾನವಾಗಿ ನಕ್ಕು, 'ಗುಡ್ ಗುಡ್' ಅಂದ. ಇವನನ್ನು ಕೆಮ್ಮು, ಸೀನು ಆವರಿಸಿಕೊಂಡವು.

ಒಂದೆರಡು ದಿನಗಳಲ್ಲಿ ಇವನಿಗೆ ನಡುಕ ಕಡಿಮೆಯಾಯಿತು. ಸದಾ ಕೊಳದ ಅಂಚಿನ ಪೈಪು ಹಿಡಿದುಕೊಂಡಿದ್ದುದರಿಂದ ನೀರಿನಲ್ಲಿಳಿಯುವುದಕ್ಕೆ, ಕನಿಷ್ಟ ಪಕ್ಷ ಕತ್ತಿನ ತನಕ ಮುಳುಗುವುದಕ್ಕೆ ಧೈರ್ಯಬಂತು. ಆದರೆ ಅದಕ್ಕಿಂತ ಮುಂದೆ ಇವನು ಬರಲಾರದಾಗ ಇವನ ಸ್ನೇಹಿತ ಒಂದು ಉಪಾಯ ಹೇಳಿಕೊಟ್ಟ. ಇದ್ದಲ್ಲೇ ಅಂಚಿನ ಪೈಪು ಎರಡು ಕೈಗಳಲ್ಲಿ ಭದ್ರವಾಗಿ ಹಿಡಿದುಕೊಂಡು ಕಾಲುಗಳನ್ನು ಹಿಂದಕ್ಕೆತ್ತಿ ಬಡಿಯುವಂತೆ ಹೇಳಿದ. ಇವನು ಉಸಿರೆಳೆದುಕೊಂಡು, ಮೈಚಾಚಿ, ಎರಡು ಕೈಗಳಲ್ಲಿ ಕಂಬಿಹಿಡಿದುಕೊಂಡು ಕಾಲುಗಳನ್ನು ಹಿಂದಕ್ಕೆ ಒದ್ದು ನೀರಿನ ಮೇಲಕ್ಕೆ ಬರಲು ಯತ್ನಿಸಿದ ನೋಡಿ, ಆಗ ಸಂಭವಿಸಿತು ಪವಾಡ. ಆತನ ಪಾದಗಳು ನೀರಿನ ಮೇಲೆ ನಿಂತವು! ಕೈಕಾಲು ಚಾಚಿದ ಕಪ್ಪೆಯ ತರಾ ನೀರಿನ ಮೇಲೆ ವಿಚಿತ್ರವಾಗಿ ನಿಂತವನನ್ನು ಎಲ್ಲರೂ ಉಸಿರು ಬಿಗಿಡಿದು ನೋಡಿದರು. ಒಂದೆರಡು ಕ್ಷಣವಷ್ಟೇ, ನೀರಿಗೆ ಇವನು ಭಾರವಾದನೇನೋ ಎಂಬಂತೆ ಧೊಪ್ಪನೆ ನೀರಿನೊಳಕ್ಕೆ ಬಿದ್ದ. ಮುಳುಗಿ ಒದ್ದಾಡುತ್ತಿದ್ದವನನ್ನು ಇವನ ಸ್ನೇಹಿತ ಹಿಡಿದೆಳೆದ. 'ಅದ್ಹೇಗೆ ಮಾಡಿದೆ ಮಾರಾಯ? ನೀರಿನ ಮೇಲೆ ಕಾಲು ಚಾಚಿ ನಿಂತೇ ಬಿಟ್ಟೆ?', ಸ್ನೇಹಿತನ ಪ್ರಶ್ನೆಗಳಿಗೆ ಇವನ ಏದುಸಿರೇ ಉತ್ತರವಾಯಿತು.

ನಂತರದ ದಿನಗಳಲ್ಲಿ ಇವನು ಪೈಪು ಹಿಡಿದುಕೊಂಡೇ ನೀರಿನಲ್ಲಿ ಮುಳುಗುವುದು, ಉಸಿರು ಬಿಗಿಹಿಡಿಯುವುದು, ಕಣ್ಣುಗಳನ್ನು ತೆರೆದೇ ಇಡಲು ಪ್ರಯತ್ನಿಸುವುದು ಮುಂತಾದವುಗಳನ್ನು ಮಾಡಿದ. ಆದರೆ ಕಾಲನೆತ್ತಿ ಬಡಿಯುವುದಕ್ಕೆ ಧೈರ್ಯ ಮಾಡಲೇ ಇಲ್ಲ. ಸ್ನೇಹಿತ ತುಂಬಾ ಒತ್ತಾಯ ಮಾಡಿದ ಮೇಲೆ, ಮೊದಲು ಮಾಡಿದ ಹಾಗೇ ಕೈಗಳಲ್ಲಿ ಭಧ್ರವಾಗಿ ಕೊಳದಂಚಿನ ಪೈಪು ಹಿಡಿದುಕೊಂಡು, ಕಾಲುಗಳನ್ನು ಹಿಂದಕ್ಕೆ ಒದ್ದ. ಈಗಲೂ ಕಾಲುಗಳು ನೀರಿನ ಮೇಲಕ್ಕೆ ಬಂದವು. ಇವನು ಕಪ್ಪೆಯೋಟಕ್ಕೆ ಕೈಕಾಲುಗಳನ್ನು ನೆಲದ ಮೇಲೆ ಊರಿನಿಂತ ಹುಡುಗನಂತೆ ಕಂಡ. ಕೊಳದಲ್ಲಿದ್ದ ಕೆಲವರು ಸೀಟಿ ಊದಿದರು, ಉದ್ಗಾರ ತೆಗೆದರು., ಚಪ್ಪಾಳೆ ತಟ್ಟಿದರು. ಕೆಲವು ಕ್ಷಣಗಳಷ್ಟೇ, ಹಿಂದೆ ಆದಂತೆ ಆಯ ತಪ್ಪಿ ಇವನು ಧೊಪ್ಪನೆ ನೀರಿಗೆ ಬಿದ್ದ, ಇವನ ಸ್ನೇಹಿತ ಇವನ ಕೈ ಹಿಡಿದು, ಪೈಪಿಗೆ ಕೈ ಹಿಡಿಸಿದ.

ಆಮೇಲಿನ ದಿನಗಳಲ್ಲಿ ಬಹಳ ಬದಲಾವಣೆಗಳಾದವು. ಈಜುಕೊಳದ ಕೋಚ್ ಇವನ ವಿಚಿತ್ರ ಶಕ್ತಿಗೆ ಬೆರಗಾದರು. ಇವನಿಗೆ ಬೆಳಿಗ್ಗೆ ಮೊದಲನೇ ತಂಡ ಬರುವುದಕ್ಕೆ ಮೊದಲೇ ಈಜುಕೊಳಕ್ಕೆ ಬರುವಂತೆ ಹೇಳಿದರು. ಶಾಂತವಾಗಿರುವ, ಅಲೆಗಳಿಲ್ಲದ ನೀರಿನಲ್ಲಿ ಕಾಲುಗಳನ್ನೂರಿ ಇನ್ನೂ ಜಾಸ್ತಿ ಸಮಯ ನಿಲ್ಲಬಹುದು ಅಂತಾ ಗೊತ್ತಾದ ಮೇಲೆ ಇವನೂ ತುಂಬಾ ಅಭ್ಯಾಸ ಮಾಡಲಾರಂಭಿಸಿದ. ಕಾಲುಗಳು ನೀರಿನ ಮೇಲೆ ನಿಲ್ಲುವಂತಾದಾಗ ಪೈಪುಹಿಡಿದಿದ್ದ ಕೈಗಳನ್ನೂ ಬಿಟ್ಟು ಕೈ ಹಸ್ತಗಳನ್ನು ನೀರಿನ ಮೇಲ್ಮೈಗೆ ಒತ್ತಿನಿಲ್ಲುವಂತೆ ಅಭ್ಯಾಸ ಮಾಡಲಾರಂಭಿಸಿದ. ಮೊದಮೊದಲು ಆಯತಪ್ಪಿ ನೀರಿಗೆ ಬಿದ್ದರೂ ಇವನ ಸ್ನೇಹಿತ ಮತ್ತು ಕೋಚ್ ಇಬ್ಬರೂ ಇವನನ್ನು ಹುರಿದುಂಬಿಸಿ ಮತ್ತೆ ಪ್ರಯತ್ನಿಸುವಂತೆ ಮಾಡಿದರು.

ಬರುವ ತಿಂಗಳಲ್ಲಿ ಅದೇ ಕೊಳದಲ್ಲಿ ರಾಷ್ಟ್ರಮಟ್ಟದ ಈಜುಸ್ಪರ್ಧೆಗಳು ನಡೆಯಲಿದ್ದು, ಸ್ಪರ್ಧೆಗೂ ಮುಂಚೆ ಇವನ ಜಲಸ್ತಂಭನ ವಿದ್ಯೆ ಪ್ರದರ್ಶಿಸಿದರೆ ಚೆನ್ನಾಗಿರುತ್ತೆ ಅಂತಾ ಕೋಚ್ ಹೇಳಿದಮೇಲೆ ಇವನು ತುಂಬಾ ಉತ್ಸಾಹಿತನಾದ. ಹಗುರವಾಗಿ ನೀರಿನ ಮೇಲೆ ಕೈಕಾಲುಗಳ ಹಸ್ತಗಳನ್ನೂರಿ ನಿಂತು, ಒಂದೆರಡು ಹೆಜ್ಜೆ ಅದೇ ರೀತಿ ಅಂಬೆಗಾಲಿಕ್ಕಿ ನಡೆಯಲು ಪ್ರಯತ್ನಿಸಿ ಸಫಲನಾದ.

ರಾಷ್ಟ್ರೀಯ ಈಜುಸ್ಪರ್ಧೆ ಬಂದೇ ಬಿಟ್ಟಿತು. ಮೊದಲನೇ ದಿನ, ಈಜುಕೊಳದ ಗ್ಯಾಲರಿ ನೋಡುಗರಿಂದ ಕಿಕ್ಕಿರಿದು ತುಂಬಿತ್ತು. ನೇರಪ್ರಸಾರಕ್ಕೆ ದೂರದರ್ಶನದ ಕ್ಯಾಮೆರಾಗಳೂ ಸಜ್ಜಾಗಿದ್ದವು. ಮೊದಲನೇ ಸುತ್ತಿನ ಸ್ಪರ್ಧಾಳುಗಳು ಕೊಳದಂಚಿಗೆ ಬಂದು ನಿಂತರು. ಆಗ ಧ್ವನಿವರ್ಧಕದಲ್ಲಿ ವಿವರಣೆ ತೂರಿಬಂತು. 'ದಯವಿಟ್ಟು ಕ್ಷಮಿಸಿ, ಮೊದಲನೇ ಸುತ್ತಿನ ಸ್ಪರ್ಧೆ ಶುರುವಾಗುವ ಮುಂಚೆ ಈ ಒಂದು ಪವಾಡವನ್ನು ನೋಡಿಬಿಡಿ; ನಮ್ಮೂರಿನ ಹುಡುಗ ಮಾಡುವ ಈ ಜಲಸ್ಥಂಭನವನ್ನು ನೋಡಿ ಆನಂದಿಸಿ.' ಯಾರಿಗೂ ಏನೂ ಅರ್ಥವಾಗಲಿಲ್ಲ. ಎಲ್ಲರೂ ಗುಸುಗುಸುಮಾಡಲಾರಂಭಿಸಿದರು. ಇವನು ಈಜುಡುಗೆಯಲ್ಲಿ ಅತ್ತಲಿಂದ ನಡೆದುಬಂದ. ಇವನೊಟ್ಟಿಗೆ ಇವನ ಸ್ನೇಹಿತನೂ ಬಂದ. ಇವನು ಪ್ರಶಾಂತವಾಗಿದ್ದ ನೀರಿನೊಳಕ್ಕೆ ಇಳಿದು, ಅಂಚಿನ ಪೈಪು ಹಿಡಿದುಕೊಂಡು ಮೆಲ್ಲನೆ ಕಾಲುಗಳನ್ನು ಹಿಂದಕ್ಕೆ ಚಾಚಿ ನೀರಮೇಲೆ ನಿಂತ! ಇಡೀ ಪ್ರೇಕ್ಷಕ ಸಮೂಹ ಉಸಿರಾಡುವುದನ್ನೂ ಮರೆತುಬಿಟ್ಟಿತು. ಟೀವಿಯಲ್ಲಿ ನೇರಪ್ರಸಾರ ನೋಡುತಿದ್ದವರೂ ಅವಕ್ಕಾಗಿ ಹೋದರು. ಇವನು ಧೀರ್ಘವಾಗಿ ಉಸಿರುಬಿಟ್ಟು ಪೈಪಿನಿಂದ ಕೈಗಳನ್ನು ತೆಗೆದು ಹಸ್ತಗಳನ್ನು ನೀರಿನ ಮೇಲ್ಮೈ ಮೇಲೆ ಊರಿನಿಂತ. ಪ್ರೇಕ್ಷಕ ವರ್ಗ ಭಯಾಶ್ಚರ್ಯಗಳಿಂದ

ಸ್ತಬ್ದವಾಯಿತು. ಇವನು ಹಸ್ತಗಳನ್ನು ಮುಂದಕಿಟ್ಟು ಒಂದೊಂದೇ ಹೆಜ್ಜೆ ಸಾವಕಾಶವಾಗಿ ಮುಂದೆ ನಡೆದ. ದೊಡ್ಡದೊಂದು ಉದ್ಗಾರ ನೋಡುಗರೆಡೆಯಿಂದ ತೂರಿಬಂತು. ಈಜುಕೊಳದ ಅಡ್ಡಡ್ಡಕ್ಕೆ ಅರ್ಧದಷ್ಟು ನಡಿದಿದ್ದನೋ ಇಲ್ಲವೋ ಆಯತಪ್ಪಿ, ಏಕಾಗ್ರತೆ ಮುಗಿದಂತಾಗಿ ಧೊಪ್ಪನೆ ನೀರಿಗೆ ಬಿದ್ದ. ಇವನ ಸ್ನೇಹಿತ ಇವನನ್ನು ಹಿಡಿಯಲೋಸುಗ ನೀರಿನೊಳಕ್ಕೆ ಧುಮುಕುವ ಮೊದಲೇ ಸ್ಪರ್ಧಾಳುಗಳಲ್ಲೇ ಕೆಲವರು ನೀರಿಗೆ ಧುಮುಕಿ ಇವನನ್ನು ಹಿಡಿದುಕೊಂಡರು; ಸಭಾಂಗಣ ಚಪ್ಪಾಳೆ, ಕೇಕೆ, ಸೀಟಿಗಳಿಂದ ತುಂಬಿಹೋಯ್ತು.

ಮುಂದಿನದನ್ನು ಹೇಳಲೇಬೇಕಾಗಿಲ್ಲ ಬಿಡಿ, ದಿನರಾತ್ರಿ ಕಳೆಯುವುದರಲ್ಲಿ ಇವನು ಸ್ಟಾರ್ ಆಗಿಬಿಟ್ಟ. ಇನ್ನೂ ಅಭ್ಯಾಸಮಾಡಿ ಇವನು ಈಜುಕೊಳದ ಉದ್ದಗಲಕ್ಕೂ ಅಂಬೆಗಾಲಿಕ್ಕಿ ನಡೆಯಲು ಪ್ರಯತ್ನಿಸಿ ಸಫಲನಾದ. ಈಗ ಅವನಿಗೆ ಸ್ನೇಹಿತನ ಅವಶ್ಯಕತೆಯೂ ಇರಲಿಲ್ಲ. ಎಲ್ಲಾ ಈಜುಸ್ಪರ್ಧೆಗಳಲ್ಲೂ ಇವನೊದೊಂದು ಪ್ರದರ್ಶನ ಇದ್ದೇ ಇರುತಿತ್ತು.  ಅದಲ್ಲದೇ ಇವನೂ ಕೆಲಸ ಬಿಟ್ಟು ಊರೂರು ತಿರುಗಿ ಇವೇ ಪ್ರದರ್ಶನಗಳನ್ನು ಕೊಡಲಾರಂಭಿಸಿದ. ಇವನ ಕಾರ್ಯಕ್ರಮಗಳನ್ನು ಆಯೋಜಿಸಲು ಊರೂರಿನ ಯುವಕ ಮಂಡಲಿಗಳೂ, ಲೇಡೀಸ್ ಕ್ಲಬ್‍ಗಳೂ ಪೈಪೋಟಿಗಿಳಿದವು, ಪ್ರಾಯೋಜಕರೂ ಬಂದರು, ಜಾಹಿರಾತುಗಳಿಂದ ಇವನಿಗೆ ಸಾಕಷ್ಟು ದುಡ್ಡೂ ಹರಿದುಬಂತು. ಇವನು ಈಜುಬಾರದವರಿಗೆ, ಇವನ ಹಾಗೆ ನೀರಿನ ಭಯ ಇದ್ದವರಿಗೆ ಮಾನಸಿಕ ತರಬೇತಿಕೊಡಲು ಕೋಚಿಂಗ್ ಕ್ಲಾಸ್‍ಗಳನ್ನೂ ಮಾಡಿದ, ನೀರಿನ ಭಯವನ್ನು ಹೇಗೆ ಜಯಿಸುವುದು, ನಡುಕವುಂಟಾದರೆ ಏನು ಮಾಡಬೇಕು, ಇತ್ಯಾದಿಯಾಗಿ ಉಪನ್ಯಾಸಗಳನ್ನೂ ಕೊಟ್ಟ, ಪತ್ರಿಕೆಗಳಲ್ಲಿ ಇವನ ವೈಯಕ್ತಿಕ ವಿಕಾಸಮಾಲೆಯೂ ಹರಿದು ಬಂತು, ಪುಸ್ತಕಗಳೂ ಪ್ರಕಟವಾದವು. ಊರಿನ ಎಮ್ಮೆಲ್ಲೆಯೊಬ್ಬ ಇವನನ್ನು ಕರೆಸಿ, ತನ್ನ ಪಕ್ಷದ ಗುರುತನ್ನು ಅಂಗಿಯಮೇಲೆಹಾಕಿಕೊಂಡು, ಚುನಾವಣೆಯ ಸಂದರ್ಭದಲ್ಲಿ ಪ್ರದರ್ಶನವೊಂದನ್ನು ಕೊಡಬೇಕೆಂಬ ಬೇಡಿಕೆಯಿಟ್ಟ. ಅದಕ್ಕೋಸ್ಕರ ಇವನಿಗೆ ಒಂದು ದೊಡ್ಡ ಮನೆ, ಹಿತ್ತಿಲಲ್ಲೇ ಈಜುಕೊಳವೊಂದನ್ನು ಕೊಡುಗೆಯಾಗಿ ಕೊಟ್ಟ. ಇವನ ಪ್ರದರ್ಶನ ವಿಪಕ್ಷಗಳಿಂದ ಗೇಲಿಗೊಳಗಾಯಿತು, ಆದರೆ ನಿರೀಕ್ಷೆಗೂ ಮೀರಿ ಯಶಸ್ವಿಯಾಯಿತು. ಅದರ ಕುರುಹಾಗಿಯೇ ಆ ಎಮ್ಮೆಲ್ಲೆ ಎರಡನೇ ಬಾರಿಗೂ ಜಯಭೇರಿ ಬಾರಿಸಿದ. ಕೊನೆಗೆ ಇವೆಲ್ಲದರ ತೂಕವೇ ಒಂದಾದರೆ ತನ್ನದೇ ಒಂದು ತೂಕವೆಂಬಂತೆ ಆ ವರ್ಷ ನಡೆಯಲಿದ್ದ ಓಲಂಪಿಕ್ಸ್‍ನಲ್ಲಿ ಈಜುಸ್ಪರ್ಧೆಗಳಿಗೂ ಮುಂಚೆ ಇವನದೊಂದು ಪ್ರದರ್ಶನ ಕೊಡುವುದಕ್ಕೆ ಆಹ್ವಾನ ಬಂತು.

ಜುಟ್ಟಿಗಿಂತ ಮಲ್ಲಿಗೇನೇ ಭಾರ ಅನಿಸಿತೇನೋ? ಇದೆಲ್ಲ ಇದುವರೆಗಿನ ಕತೆ. ಒಬ್ಬ ಜಲಭಯದ ವ್ಯಕ್ತಿ ತನ್ನ ಭಯವನ್ನು ‘ಅಮೋಘ‘ವಾಗಿ ಜಯಿಸಿ, ಹೆಸರಾದ ಕತೆ. ಓಲಂಪಿಕ್ಸ್‍ನಲ್ಲಿ ಇವನ ಪ್ರದರ್ಶನ ತುಂಬ ಹೆಸರುವಾಸಿಯಾಯಿತು. ಇವನ ಪ್ರದರ್ಶನಗಳಿಗೆ, ಪ್ರವಚನಮಾಲೆಗಳಿಗೆ ವಿದೇಶಗಳಿಂದಲೂ ಬೇಡಿಕೆಬಂತು, ಇವನು ಪ್ರಪಂಚದಾದ್ಯಂತ ಮನೆಮಾತಾಗಿ ಹೋದ.

ಇವುಗಳೆಲ್ಲದರ ಮಧ್ಯೆಯೂ ಇವನು ತನ್ನ ತರಭೇತಿ ನಿಲ್ಲಿಸಲಿಲ್ಲ. ಊರಿನಲ್ಲಿದ್ದಾಗಲೆಲ್ಲ ಕೈಕಾಲು ನೋಯುವವರೆಗೂ ಗಂಟೆಗಟ್ಟಲೆ ಮನೆಯ ಹಿಂದಿನ ಸ್ವಂತದ ಈಜುಕೊಳದಲ್ಲಿ ನೀರಮೇಲೆ ನಡೆಯುವ ಅಭ್ಯಾಸ ಮಾಡಿದ. ಜಲಸ್ತಂಭನದ ಬಗ್ಗೆ ಪ್ರಪಂಚದಲ್ಲಿರುವ ಪುಸ್ತಕಗಳನೆಲ್ಲ ಅಭ್ಯಸಿಸಿದ. ಸಿಹಿನೀರಿನ ಬಾವಿಗಳಲ್ಲಿ ತನ್ನಂತೆಯೇ ನೀರಿನ ಮೇಲೆ ಕೈಕಾಲು ಚಾಚಿ ಸರಿದಾಡುವ ಕಪ್ಪು ಕೀಟಗಳ ಬಗ್ಗೆ ತಿಳಿದುಕೊಂಡ. ತನಗಿರುವ ಶಕ್ತಿಯ ಹಿಂದಿರುವ ವೈಜ್ಞಾನಿಕ ತತ್ವಗಳನ್ನು ಅರಿತುಕೊಂಡ. ಅಲೆಗಳಿರುವ, ತುಳುಕುತ್ತಿರುವ ನೀರಿನ ಮೇಲೂ ನಡೆ ಸಾಧಿಸಿ ಯಶಸ್ವಿಯಾದ. ಕೊನೆಗೊಂದು ದಿನ ಪ್ರಕಟಣೆಕೊಟ್ಟ, ‘ಸಮುದ್ರದ ಮೇಲೆ ಎರಡೇ ಕಾಲುಗಳಲ್ಲಿ ನಡೆದು ತೋರಿಸುತ್ತೇನೆ.‘

ಇಂದೇ ಆ ದಿನ; ದೇಶವಿದೇಶದ ಪತ್ರಕರ್ತರು, ಟೀವಿ ಚಾನೆಲ್‍ಗಳವರು, ಸಮುದ್ರ ತೀರದ ಈ ಊರಿಗೆ ಬಂದಿಳಿದಿದ್ದಾರೆ; ಗಣ್ಯವ್ಯಕ್ತಿಗಳು, ಸಿನೆಮಾದವರು, ಸಂಘಸಂಸ್ಥೆಗಳ ಮುಖ್ಯಸ್ತರು, ಪ್ರಾಯೋಜಕರು ಎಲ್ಲರೂ ಬಂದಿದ್ದಾರೆ. ಇನ್ನೇನು  ಕಾರ್ಯಕ್ರಮಕ್ಕೆ ಅರ್ಧಗಂಟೆಯಿದೆ ಅನ್ನುವಾಗ ಸಮುದ್ರತೀರದಲ್ಲಿ ನೆರೆದಿರುವಂತಹ ಜನಸ್ತೋಮಕ್ಕೆ ನಿರಾಶೆಯಾಗುವಂತೆ ಪ್ರಕಟಣೆಯೊಂದು ಹೊರಬಂತು. ‘ಸಮುದ್ರತೀರದಲ್ಲಿ ಅಲೆಗಳು ಭಾರಿ ಇರುವುದರಿಂದ ತೀರದಿಂದ ಅರ್ಧ ಕಿಲೋಮೀಟರ್ ದೂರದಲ್ಲಿ ಸಮುದ್ರದ ಮೇಲೆ ಎರಡು ದೋಣಿಗಳ ಮಧ್ಯೆ ಈ ‘ನೀರ ಮೇಲಿನ ನಡೆ‘ ನಡೆಯುವುದು. ತೀರದಲ್ಲಿರುವ ಜನರಿಗೂ ಈ ಪ್ರದರ್ಶನ ಕಾಣುವುದು. ಆದರೆ ಆಹ್ವಾನಿತರಿಗೆ, ವಿಶೆಷ ವ್ಯಕ್ತಿಗಳಿಗೆ ಮತ್ತು ಟಿಕೇಟು ಪಡೆಯುವವರಿಗೆ ಈ ಎರಡು ದೋಣಿಗಳಾಚೀಚೆ ನಿಲ್ಲಿಸಲಾದ ದೊಡ್ಡ ಹಡಗುಗಳಲ್ಲಿ ನಿಂತು ಈ ಪ್ರದರ್ಶನ ನೋಡುವ ಅವಕಾಶ ಕಲ್ಪಿಸಲಾಗುವುದು.‘

ಟಿಕೇಟುಗಳು ಕ್ಷಣಾರ್ಧದಲ್ಲಿ ಖಾಲಿಯಾದವು, ಹಡಗುಗಳೆರಡು ಭರ್ತಿಯಾದವು, ಚಿತ್ರೀಕರಣಕ್ಕೆಂದು ಎರಡು ಹೆಲಿಕಾಪ್ಟರ್‍ಗಳು ಬಂದವು. ನಿಗದಿಪಡಿಸಿದ್ದ ಸಮಯಕ್ಕೆ ಸರಿಯಾಗಿ ದೊಡ್ಡದೊಂದು ಜೀಪಿನಲ್ಲಿ ಇವನು ದಡಕ್ಕೆ ಬಂದಿಳಿದ. ಉದ್ದನೆಯ ನಿಲುವಂಗಿ ತೊಟ್ಟು, ಗಡ್ಡ ಬಿಟ್ಟಿದ್ದ ಈತನನ್ನು ನೋಡಿದ ಜನಸ್ತೋಮ ಹುಚ್ಚೆದ್ದು ಕುಣಿಯಿತು. ಗುಂಪಿನಲ್ಲಿದ್ದವರ್ಯಾರೋ ‘ಇವನು ದೇವರ ಮಗನೇ ಸರಿ‘ ಎಂದರು, ಅದಕ್ಕೆ ಕೆಲವರು ಅನುಮೋದನೆಯಿತ್ತು, ‘ಹೌದು, ಹೌದು‘ ಎಂದು ಜೈಕಾರ ಹಾಕಿದರು, ಕೆಲವರಿಗೆ ಇದನ್ನು ಸಹಿಸಲಾಗಲಿಲ್ಲ, ‘ಇವನು ಮೋಸಗಾರ; ನೀರಿನ ಮೇಲೆ ನಡೆದ ಮಾತ್ರಕ್ಕೇ ಮಹಾತ್ಮನಾಗುವುದಿಲ್ಲ‘, ಎಂದು ಧಿಕ್ಕಾರ ಕೂಗಿದರು. ಇದೆಲ್ಲವೂ ಅವನಿಗೆ ಕೇಳಿಸಿತು. ಜನರಲ್ಲಿ ಸಣ್ಣ ಗಲಭೆಯುಂಟಾಯಿತು, ಇವನು ನಸುನಕ್ಕು, ಆಶೀರ್ವದಿಸುವಂತೆ ಎರಡೂ ಕೈಗಳನೆತ್ತಿ ಜನರೆಡೆಗೆ ನೋಡಿ, ತನಗಾಗಿ ಕಾದುನಿಂತಿದ್ದ ಮೋಟಾರ್‍ಬೋಟ್ ಹತ್ತಿದ, ಅದು ವೇಗವಾಗಿ ಸಮುದ್ರದ ಮೇಲೆ ನಿಂತಿದ್ದದೋಣಿಗಳೆಡೆಗೆ ಸಾಗಿತು.

ಹವಾಮಾನ ತುಂಬಾ ಚೆನ್ನಾಗಿತ್ತು, ಬಿಸಿಲು ಪ್ರಖರವಾಗಿತ್ತಾದರೂ, ಸುಡುವಷ್ಟಿರಲಿಲ್ಲ, ಗಾಳಿಯಿರಲಿಲ್ಲ, ಒಣಹವೆಯಿತ್ತು. ನೀರಮಧ್ಯೆ ನಿಂತಿದ್ದ ಒಂದು ಬೋಟ್‍ಹತ್ತಿಕೊಂಡ ಇವನು ಆಕಡೆಗೆ ನಿಂತಿದ್ದ ಇನ್ನೊಂದು ಬೋಟ್ ನೋಡಿದ. ನಡುವೆಯಿದ್ದ ದೂರವನ್ನು ಕಣ್ಣಲ್ಲೇ ಅಳತೆ

ಹಾಕಿದ, ಹೆಚ್ಚೆಂದರೆ ನಾಲ್ಕೂರು–ಐನೂರು ಮೀಟರ್‌ಗಳಷ್ಟಿರಬಹುದೆನಿಸಿತು. ಹಿಂದಿನ ದಿನಗಳಲ್ಲಿ ಮನೆಯಲ್ಲಿ ಮಾಡಿದ್ದ ಗಂಟೆಗಟ್ಟಲೆ ಅಭ್ಯಾಸದಲ್ಲಿ ಸಫಲನಾಗಿದ್ದುದರಿಂದ ಕಿಂಚಿತ್ತೂ ಭಯವಾಗಲಿಲ್ಲ. ಅವನೊಟ್ಟಿಗೆ ಇದೆಲ್ಲದಕ್ಕೂ ಕಾರಣನಾದ ಅವನ ಸ್ನೇಹಿತನೂ ಮತ್ತು ಕೋಚ್ ನಿಂತಿದ್ದರು. ಅವರಿಬ್ಬರನ್ನೂ ಅಪ್ಪಿಕೊಂಡು, ಜೊತೆಗೇ ನಿಂತಿದ್ದ ಗಣ್ಯರಿಗೆ, ಪ್ರಾಯೋಜಕರಿಗೆ ಹಸ್ತಲಾಘವನೀಡಿ, ಹಿಂದೆ ನಿಂತಿದ್ದ ಹಡಗಿನೆಡೆಗೆ ಎರಡು ಕೈಚಾಚಿ ತೋರಿಸಿ, ಮೆಲ್ಲನೆ ಹಗ್ಗದ ಸಹಾಯದಿಂದ ನೀರಿನ ಮೇಲ್ಮೈ ತಲುಪಿದ; ನೀರಿನ ಮೇಲೆ ಎರಡೂ ಕಾಲುಗಳನ್ನೂರಿ ನಿಂತು ಮೆಲ್ಲನೆ ಹಿಡಿದುಕೊಂಡಿದ್ದ ಹಗ್ಗವನ್ನು ಬಿಟ್ಟ. ಹಡಗುಗಳಲ್ಲಿದ್ದವರು ಉದ್ಗಾರ ತೆಗೆದರು, ದೂರದಂಚಿನ ದಡದಲ್ಲಿ ಚುಕ್ಕಿಗಳಂತೆ ಕಾಣುತ್ತಿದ್ದ ಜನರಲ್ಲೂ ಸಂಚಲನ ಕಾಣುತಿತ್ತು. ಇವನು ಎರಡು ಕೈಗಳನ್ನೂ ಚಾಚಿಕೊಂಡು ಮೆಲ್ಲನೆ ಮೊದಲನೇ ಹೆಜ್ಜೆಯಿಟ್ಟ, ನಂತರ ಎರಡನೇ ಹೆಜ್ಜೆ...

ಪ್ರಪಂಚದಲ್ಲಿ ಅತ್ಯಂತ ಕಷ್ಟಸಾಧ್ಯವಾದದ್ದು ಇದೇ ಇರಬೇಕು; ಇದನ್ನೇ ನಾನು ಗೆದ್ದು ಬಿಟ್ಟಿದ್ದೇನೆ ಅನಿಸಿತು. 'ದೇವರ ಪುತ್ರ' ಅಂದುದನ್ನು ನೆನಪಿಸಿಕೊಂಡು ಅವನ ಮುಖದಲ್ಲಿ ನಗುಮೂಡಿತು. 'ಹೌದು, ನಾನು ದೇವರ ಪುತ್ರ' ಅಂದುಕೊಂಡ. ಮೊದಮೊದಲು ನೀರನ್ನು ಕಂಡರಾಗುತಿದ್ದ ಜೀವಭಯ ಅವನ ನೆನಪಿಗೆ ಬಂತು. ಬಾಲ್ಯದ ಘಟನೆ, ಕೆರೆ, ನೀರು, ಹಸಿರ ಪರದೆ ಎಲ್ಲವೂ ನೆನಪಿಗೆ ಬಂದವು.

ಮೆಲ್ಲನೆ ನಡೆಯುತ್ತಿದ್ದವನು ನೀರನ್ನು ನೋಡಿದ. ಕಡುನೀಲಿನೀರು ಹೆಚ್ಚು ಅಲೆಗಳಿಲ್ಲದೇ ಪ್ರಶಾಂತವಾಗಿತ್ತು. ಎಷ್ಟು ಆಳ ಇರಬಹುದೋ ಅನಿಸಿತು. ಈ ನೀರು ಈಗ ನನ್ನನ್ನು ಕಂಡರೆ ಹೆದರುತ್ತದೆ ಅಂದುಕೊಂಡು ನಸುನಕ್ಕು ಮುಂದೆ ಹೆಜ್ಜೆಯಿಟ್ಟವನಿಗೆ ಯಾಕೋ ಆಯ ತಪ್ಪಿದಂತಾಯಿತು. ಮೆಲ್ಲನೆ ಹೆಜ್ಜೆಯಿಳಿಸಿ ನಿಂತು ನೀರನ್ನೇ ನೋಡಿದವನಿಗೆ ಯಾಕೋ ಭಯ ಆವರಿಸಿಕೊಂಡಿತು, ಹಿಂತಿರುಗಿ ನೋಡಿದವನಿಗೆ ಅರ್ಧದಾರಿ ಬಂದಿರುವುದು ಅರಿವಾಯಿತು, ಸ್ನೇಹಿತನೂ, ಪ್ರಾಯೋಜಕರೆಲ್ಲ ಹೇಳಿದರೂ ಸುರಕ್ಷತೆಯ ಯಾವುದೇ ಬಂದೋಬಸ್ತು ಮಾಡಿಕೊಳ್ಳಲೊಪ್ಪದೇ ಇದ್ದುದು ನೆನಪಾಯಿತು. ದೂರದಲ್ಲಿದ್ದ ಜನ ನಿಶ್ಚಲವಾದ ತಾರೆಗಳಂತೆ ಕಾಣುತ್ತಿದ್ದರು. ಈತನ ಸ್ನೇಹಿತ ಮತ್ತು ಕೋಚ್ ಇವನನ್ನೇ ನೋಡುತ್ತಿರುವುದು ಕಾಣಿಸಿತು. ಸಹಾಯಕ್ಕಾಗಿ ಕರೆಯೋಣವೆಂದರೆ ಧ್ವನಿಯೇ ಹೊರಡಲಿಲ್ಲ. ವೈಯಕ್ತಿಕ ವಿಕಾಸಮಾಲೆಯ ತನ್ನ ಪ್ರವಚನಗಳೆಲ್ಲ ನೆನಪಿಗೆ ಬಂದವು, ಧೈರ್ಯವಹಿಸುವುದು ಹೇಗೆ, ಉಸಿರು ಬಿಗಿಹಿಡಿಯುವುದು ಹೇಗೆ, ಎಲ್ಲ ಉಪನ್ಯಾಸಗಳೂ ನೆನಪಾದವು. ಧೈರ್ಯವಹಿಸಿ ಮುಂದೆ ಹೆಜ್ಜೆ ಕಿತ್ತಿಟ್ಟವನನ್ನು ನೀರು ಎತ್ತಿ ಹಿಡಿಯಲಿಲ್ಲ. ಧೊಪ್ಪನೆ ನೀರಿಗೆ ಬಿದ್ದವನನ್ನು ನೀರು ಆವರಿಸಿಕೊಂಡಿತು. ಉಸಿರು ಬಿಗಿ ಹಿಡಿದರೂ ನಿಲುವಂಗಿಯ ಬಟ್ಟೆ ದೇಹವನ್ನು ಸುತ್ತಿಕೊಂಡಂತಾಯ್ತು. ತಕ್ಷಣ, ಈ ಐದು ವರ್ಷಗಳಲ್ಲಿ ತಾನು ಈಜುವುದನ್ನು ಕಲಿಯಲೇ ಇಲ್ಲ ಎಂಬುದು ತಲೆಯ ಮೇಲೆ ಸುತ್ತಿಗೆ ಹೊಡೆದಂತೆ ನೆನಪಿಗೆ ಬಂತು! ನೀರಿನೊಳಗೆ ಹೇಗೆ ಕೈಕಾಲು ಆಡಿಸಬೇಕೆಂಬುದೂ ಅವನಿಗೆ ತಿಳಿದಿರಲಿಲ್ಲ! ಮುಳುಗುವ ಮುನ್ನ ದೂರದ ದೋಣಿಯಲ್ಲಿದ್ದ ಆತನ ಸ್ನೇಹಿತ ಮತ್ತು ಕೋಚ್ ಇಬ್ಬರೂ ನೀರಿಗೆ ಹಾರಿದ್ದು ಕಾಣಿಸಿತು. ಅಲ್ಲೇ ಇದ್ದ ಮೋಟಾರ್‌ಬೋಟ್ ಶುರುವಾದ ಶಬ್ಧ ಕೇಳಿಸಿತು. ಕತ್ತೆತ್ತಿದವನಿಗೆ ಬಿಸಿಲ ಕಕ್ಕುವ ಸೂರ್ಯ ಕಂಡ, ಕ್ಷಣಾರ್ಧದಲ್ಲಿ ಸೂರ್ಯನಿಗಡ್ಡವಾಗಿ ಬಂದ ಹೆಲಿಕಾಪ್ಟರ್ ಕಾಣಿಸಿತು. ಕೈಗಳನೆತ್ತಿ ಮುಳುಗಿಕೊಂಡವನಿಗೆ ಉಸಿರು ನಿಂತುಹೋಯಿತು, ತಿಳಿನೀಲಿ ನೀರು ಕಣ್ಣಮುಂದೆ ಪರದೆ ಕಟ್ಟಿತು. ನೀರು ಇವನ ಮೈಯನ್ನು ಬಟ್ಟೆಯಂತೆ ಹಿಂಡಿ ಪ್ರಾಣವಾಯುವನ್ನು ತೆಗೆಯುವ ಪ್ರಯತ್ನ ಮಾಡುತ್ತಿದೆಯೆನಿಸಿತು. ಹಿಡಿದುಕೊಂಡಿದ್ದ ಉಸಿರು ಬಿಟ್ಟವನಿಗೆ ತಿಳಿನೀಲಿ ಹೊಳಪಿನ ನೀರ ತೆರೆ, ನೀಲಿಯಾಗಿ, ಕಡುನೀಲಿಯಾಗಿ ಕಪ್ಪಗಾಗುವುದು ಕಾಣಿಸಿತು. ಕಣ್ಣು ಕತ್ತಲಿಡುವ ಮುಂಚೆ ಪ್ರಾಣವಾಯುವಿನ ಕಟ್ಟಕಡೆಯ ತುತ್ತು ದೊಡ್ಡ ಗುಳ್ಳೆಯಾಕಾರದಲ್ಲಿ ಇವನನ್ನು ಬಿಟ್ಟು ಮೇಲಕ್ಕೇರುವುದು ಕಾಣಿಸಿತು.

**ಹ್ಯಾವ್ ಎ ನೈಸ್ ಡೇ!**

**ಶಿವಕುಮಾರ ಕೆ. ಎಸ್. ks_shivu@yahoo.com**